1136 (548) ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ):– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಗೆ ಬಜೆಟ್‌ನಲ್ಲಿ ಒದಗಿಸಲಾದ ಹಣವೆಷ್ಟು;

(ಆ) ಸದರಿ ಹಣ ಸಾಕಾಗುತ್ತದೆಯೇ;

(ಇ) ಸಾಕಾಗದಿದ್ದರೆ ಹೆಚ್ಚಿನ ಹಣ ಒದಗಿಸಲಾಗುವುದೇ?

ಶ್ರೀ ವಿ.ಎಸ್. ಆಚಾರ್ಯ (ವೈದ್ಯಕೀಯ ಸಚಿವರು) :–

(ಅ) 2007–09ನೇ ಸಲಿನಲ್ಲಿ ಆಯವ್ಯಯದಲ್ಲಿ ಒದಗಿಸಲಾದ ಅನುದಾನ ಈ ಕೆಳಗಿನಂತಿದೆ

ಯೋಜನೆ – ರೂ. 1100 ಲಕ್ಷಗಳು

ಯೋಜನೇತರ – ರೂ. 2407 ಲಕ್ಷಗಳು

ಒಟ್ಟು ರೂ. 3507 ಲಕ್ಷಗಳು

(ಆ) ಸಾಕಾಗುವುದಿಲ್ಲ

(ಇ) ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ ಹುಬ್ಬಳ್ಳಿ. ಒಂದು ಸ್ವಾಯತ್ತ ಸಂಸ್ಥೆಯಾಗಿರುವ ಹಿನ್ನೆಲೆಯಲ್ಲಿ ಸರ್ಕಾರದಿಂದ ಆಯವ್ಯಯ ಬೆಂಬಲ ನೀಡಲಾಗುವುದು, ತನ್ನ ಹೆಚ್ಚಿನ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಂಸ್ಥೆಯೇ ತನ್ನ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಬೇಕಾಗುತ್ತದೆ.

1137 (1231) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ):– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಜನನಿ ಸುರಕ್ಷಾ ಯೋಜನೆಯಡಿಯಲ್ಲಿ ಭಾಲ್ಕಿ ತಾಲ್ಲೂಕಿಗೆ 2003 ರಿಂದ ಈವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ (ವರ್ಷವಾರು ವಿವರ ನೀಡುವುದು):

(ಆ) ಹಾಗಿದ್ದಲ್ಲಿ, ಬಿಡುಗಡೆಯಾಗಿರುವ ಹಣದಲ್ಲಿ ಎಷ್ಟು ಖರ್ಚಾಗಿದೆ;

(ಇ) ಉಳಿದಿರುವ ಹಣವೆಷ್ಟು ; ಅದನ್ನು ಅಲ್ಲಿಯೇ ಅದೇ ಯೋಜನೆಯಲ್ಲಿಯೇ ಖರ್ಚು ಮಾಡಲಾಗಿದೆಯೇ ಅಥವಾ ಸರ್ಕಾರಕ್ಕೆ ಹಿಂದಿರುಗಿಸಲಾಗಿದೆಯೆ (ವಿವರ ಒದಗಿಸುವುದು)?

ಶ್ರೀ ಆರ್. ಅಶೋಕ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಅ) ಜನನಿ ಸುರಕ್ಷಾ ಯೋಜನೆಯಡಿಯಲ್ಲಿ ಭಾಲ್ಕಿ ತಾಲ್ಲೂಕಿಗೆ ಬಿಡುಗಡೆಯಾಗಿರುವ ಅನುದಾನ ಈ ಕೆಳಗಿನಂತಿದೆ